# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/106/2014-15 ದಿನಾಂಕ :08/09/ 2016

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಹಡ್ಲಿಗಿ ಶೇಖಣ್ಣ ತಂದೆ ಬಸಪ್ಪ<br>ತೆಕ್ಕಲಕೋಟೆ ಗ್ರಾಮ, ಸಿರುಗುಪ್ಪ ತಾಲೂಕು<br>(ಶ್ರೀಪಿ.ಮಲಯ್ಯ,ವಕೀಲರು,ಬಳ್ಳಾರಿ) | 1. ತಹಶೀಲ್ದಾರರು, ಸಿರುಗುಪ್ಪ<br>2.ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ<br>3.ಗ್ರಾಮಲೆಕ್ಕಾಧಿಕಾರಿಗಳು, ನಡವಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ನಡವಿ | 348/A | 3.18 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ತೆಕ್ಕಲಕೋಟೆ ಇವರ ಎಂ.ಆರ್.ನಂ.127/2007-08 ದಿನಾಂಕ:15.04.2008 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 16.06.2015,11.03.2016,26.04.2016,08.09.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ನಡವಿ ಗ್ರಾಮದ ಸ.ನಂ.348/A ವಿಸ್ತೀರ್ಣ:3.18 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಹಕ್ಕು ಬದಲಾವಣೆ ಗೈರು ಮಂಜೂರು ಆದೇಶ ಎಂ. ಆರ್.ನಂ. 127/2007-08 ದಿನಾಂಕ:15.04.2008 ರಲ್ಲಿ ಕ್ರಯದಾರರು ಕೃಷಿಕರು ಎನ್ನುವುದಕ್ಕೆ ಯಾವುದೇ ದಾಖಲೆ ಲಗತ್ತಿಸಿರುವುದಿಲ್ಲವೆಂದು ಹಕ್ಕು ಬದಲಾವಣೆ ಗೈರು ಮಂಜೂರು ಮಾಡಿರುವುದರ ವಿರುದ್ಧ ಮೇಲ್ಮನವಿ ಪ್ರಶ್ನಿಸುತ್ತಾ, ಸದರಿ ಗೈರು ಮಂಜೂರು ಆದೇಶವನ್ನು ರದ್ದು ಪಡಿಸಿ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಕಾರಣ ಸದರಿ ಮೇಲ್ಮನವಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಾಗಿ ಸಿರುಗುಪ್ಪ ತಾಲೂಕು ನಡವಿ ಗ್ರಾಮದ ಸ.ನಂ.348/A ವಿಸ್ತೀರ್ಣ:3.18 ಜಮೀನನ್ನು ಕ್ರಯದ ಮುಂಖಾತರ ಕ್ರಯನೊಂದಾಣಿ ಸಂಖ್ಯೆ 3645/07-08 ದಿನಾಂಕ:20.02.2008 ರಂದು ಖರೀದಿಸಲಾಗಿದ್ದು,ಕ್ರಯ ಪತ್ರದಂತೆ ಸದರಿ ಜಮೀನಿನ ಹಕ್ಕು ಬದಾವಣೆಯನ್ನು ಮಾಡಲು ಮೇಲ್ಮನವಿಯಲ್ಲಿ ಕೋರಿರುತ್ತಾರೆ.ವಾದಿಗಳು ಕೃಷಿಕರೆಂಬುದಕ್ಕೆ ಕೃಷಿ ಕಾರ್ಮಿಕ ದೃಢೀಕರಣ ಪತ್ರ ಹಾಜರುಪಡಿಸಿರುತ್ತಾರೆ, ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಹಕ್ಕು ಬದಲಾವಣೆಯನ್ನು ಗೈರು ಮಂಜೂರಾತಿ ಆದೇಶವನ್ನು ರದ್ದು ಪಡಿಸುತ್ತಾ, ವಾದಿಯ ಹೆಸರಿನಲ್ಲಿ ಕ್ರಯಪತ್ರದಂತೆ ಹಕ್ಕು ಬದಲಾವಣೆ ಮಾಡಲು ಆದೇಶಿಸುವ ಈ ಕೆಳಕಂಡಂತೆ ಆದೇಶ.

:: ಆದೇಶ ::

**ವಾದಿಯ ಮೇಲ್ಮನವಿ ಪುರಸ್ಕರಿಸಿದೆ:**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ನಡವಿ ಗ್ರಾಮದ ಸ.ನಂ348/A ವಿಸ್ತೀರ್ಣ:3.18ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ 127/2007-08 ದಿನಾಂಕ:15.04.2008 ರ ಆದೇಶವನ್ನು ರದ್ದುಗೊಳಿಸಿದೆ, ಕ್ರಯಪತ್ರದಂತೆ ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ: 08.09.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ